REGISTERED WITH RNI NEW DELHI REG. N0.69683/97-Postal Registration No.RNP/KA/BGS/2259/2024-2026
Office of Posting: Bangalore PSO, Bangalore - 560026.; Date of Posting & Publishing Every Wednesday; Price Rs. 2 (Pages-8)

ಪಟ್ಟಣ ಸಹಕಾರ ಬ್ಯಾಂಕುಗಳ
# ವಾರ್ತಾ ಪತ್ರಿಕೆ

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಅಧಿಕೃತ ಕನ್ನಡ ವಾರಪತ್ರಿಕೆ

ಸಂಪುಟ : 33 । ಸಂಚಿಕೆ : 24 । 16 ಸೆಪ್ಟೆಂಬರ್ 2026 । ಬುಧವಾರ । ಪುಟಗಳು : 8 । ಬೆಲೆ : 2/-

## ರಾಷ್ಟ್ರೀಯ ಪಟ್ಟಣ ಸಹಕಾರ ಬ್ಯಾಂಕುಗಳ ಮತ್ತು ಪತ್ತಿನ ಸಂಘಗಳ ಮಹಾಮಂಡಳದ 50ನೇ ವಾರ್ಷಿಕ ಮಹಾಸಭೆ




**ನವದೆಹಲಿ :** ರಾಷ್ಟ್ರೀಯ ಪಟ್ಟಣ ಸಹಕಾರ ಬ್ಯಾಂಕುಗಳ ಮತ್ತು ಪತ್ತಿನ ಸಂಘಗಳ ಮಹಾಮಂಡಳದ 50ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆಯು ದಿನಾಂಕ : 07.09.2026 ರಂದು ನವದೆಹಲಿಯ, ಎನ್‌ಸಿಯುಐ, ಸಭಾಂಗಣದಲ್ಲಿ ನ್ಯಾಫಕಬ್‌ನ ಅಧ್ಯಕ್ಷರಾದ ಶ್ರೀ ಲಕ್ಷ್ಮಿದಾಸ್ ರವರ ಅಧ್ಯಕ್ಷತೆಯಲ್ಲಿ ಜರುಗಿತು.

ನ್ಯಾಫಕಬ್‌ನ 50ನೇ ವಾರ್ಷಿಕ ಸಾಮಾನ್ಯ ಸಭೆಯನ್ನು (AGM) ಉದ್ದೇಶಿಸಿ ಮಾತನಾಡಿದ NAFCUB ಅಧ್ಯಕ್ಷರಾದ ಶ್ರೀ ಲಕ್ಷ್ಮಿದಾಸ್ ಫೆಬ್ರವರಿ 2027ರಲ್ಲಿ ದೆಹಲಿಯಲ್ಲಿ ಮಹಾ ಸುವರ್ಣ ಮಹೋತ್ಸವ ಕಾರ್ಯಕ್ರಮವನ್ನು ಆಯೋಜಿಸುವುದಾಗಿ ಘೋಷಿಸಿದರು, ಇದರಲ್ಲಿ ಸಹಕಾರಿ ನಾಯಕರು, ಪಟ್ಟಣ ಸಹಕಾರಿ ಬ್ಯಾಂಕುಗಳು (UCBಗಳು) ಮತ್ತು ಪತ್ತಿನ ಸಹಕಾರಿ ಸಂಘಗಳನ್ನು ಒಟ್ಟುಗೂಡಿಸಲಾಗುತ್ತದೆ. ಕಾರ್ಯಕ್ರಮದ ದಿನಾಂಕವನ್ನು ಶೀಘ್ರದಲ್ಲೇ ಘೋಷಿಸಲಾಗುವುದು.

ಜಿಡಿಪಿ ಬೆಳವಣಿಗೆ, ಆರ್ಥಿಕ ಸೇರ್ಪಡೆ ಮತ್ತು ಸಮಗ್ರ ಆರ್ಥಿಕ ಅಭಿವೃದ್ಧಿಯಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳು ಪ್ರಮುಖ ಪಾತ್ರ ವಹಿಸುತ್ತವೆ ಎಂದು ದಾಸ್ ಹೇಳಿದರು. ಹಲವಾರು ಯಶಸ್ವಿ ಸಹಕಾರಿ ಬ್ಯಾಂಕುಗಳು ಸಾಧಾರಣ ಬಂಡವಾಳದಿಂದ ಪ್ರಾರಂಭವಾದರೂ ಅಂತಿಮವಾಗಿ ಸಾವಿರಾರು ಕೋಟಿ ಮೌಲ್ಯದ ವ್ಯವಹಾರ ಹೊಂದಿರುವ ಸಂಸ್ಥೆಗಳಾಗಿ ಬೆಳೆದಿವೆ ಎಂದು ಅವರು ಹೇಳಿದರು. "ಸಹಕಾರಿ ಬ್ಯಾಂಕುಗಳು ಸಹ ಬೆಳೆಯಲು ಅವಕಾಶವನ್ನು ನೀಡಬೇಕು" ಎಂದು ಅವರು ಹೇಳಿದರು.

ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಸಂಬಂಧಿಸಿದ 21 ಪ್ರಮುಖ ಸಮಸ್ಯೆಗಳನ್ನು NAFCUB ಇತ್ತೀಚೆಗೆ ಎಸ್‌ಎಸಿ ಸಮಿತಿಯ ಮುಂದೆ ಇರಿಸಿದೆ ಎಂದು ಹೇಳಿದರು. ತಂತ್ರಜ್ಞಾನವು ಪ್ರಮುಖ ಆದ್ಯತೆಯಾಗಿದೆ ಎಂದು ಅವರು ಹೇಳಿದರು ಮತ್ತು ಬಾಹ್ಯ ತಂತ್ರಜ್ಞಾನ ಪೂರೈಕೆದಾರರ ಮೇಲಿನ ವಲಯದ ಅವಲಂಬನೆಯನ್ನು ಕಡಿಮೆ ಮಾಡಲು ಸಾಮಾನ್ಯ ಕೋರ್ ಬ್ಯಾಂಕಿಂಗ್ ಪರಿಹಾರ (CBS) ಸೇರಿದಂತೆ ಕೈಗೆಟುಕುವ ಮತ್ತು ಪ್ರವೇಶಿಸಬಹುದಾದ ತಂತ್ರಜ್ಞಾನ ಪರಿಸರ ವ್ಯವಸ್ಥೆಯನ್ನು




3ನೇ ಪುಟಕ್ಕೆ...

2 ದಾಸೋಹ ನಿಧಿಗೆ ಕಾಣಿಕೆ ಸಮರ್ಪಣೆ
4 ಟೆಕ್ಸ್‌ಟೈಲ್ ಕೋ-ಆಪರೇಟಿವ್ ಬ್ಯಾಂಕ್ ಲಿ., ಬೆಂಗಳೂರು : 63ನೇ ಸರ್ವ ಸದಸ್ಯರ ವಾರ್ಷಿಕ ಸಭೆ
7 ನಿಮ್ಮ ಪ್ರಶ್ನೆ ನಮ್ಮ ಉತ್ತರ

## ಸಂಪಾದಕೀಯ

### ಆತ್ಮೀಯ ಸಹಕಾರಿಗಳೇ...



## ದೇಶದ ಪ್ರಬಲ ಆರ್ಥಿಕ ಶಕ್ತಿಯೇ ಕರ್ನಾಟಕ ಎನ್ನುವುದನ್ನು ಕೇಂದ್ರ ಸರ್ಕಾರ ಅರಿಯಬೇಕಿದೆ

ಇತ್ತೀಚೆಗೆ ನಡೆದ ದಕ್ಷಿಣ ವಲಯದ ಮಂಡಳಿಯ 31ನೇ ಸಭೆಯಲ್ಲಿ ಮಾತನಾಡಿರುವ ನಮ್ಮ ಮುಖ್ಯಮಂತ್ರಿಗಳಾದ ಡಿ.ಕೆ.ಶಿವಕುಮಾರ್ ಅವರು, ನಮ್ಮ ರಾಜ್ಯ ಆರ್ಥಿಕವಾಗಿ ಅಭಿವೃದ್ಧಿ ಸಾಧಿಸಿದಾಗಲೇ ದೇಶದ ಆರ್ಥಿಕತೆ ಮತ್ತಷ್ಟು ಪ್ರಗತಿ ಸಾಧಿಸುತ್ತದೆ ಎನ್ನುವುದನ್ನು ಅಂಕಿ ಅಂಶಗಳ ಮೂಲಕ ಹೇಳಿದ್ದಾರೆ. ಹಾಗೆಯೇ ದಕ್ಷಿಣ ಭಾರತ ಬಲಿಷ್ಠವಾದಾಗಲೆಲ್ಲ ಅದು ದೇಶವನ್ನು ಮತ್ತಷ್ಟು ಬಲಿಷ್ಠಗೊಳಿಸುತ್ತದೆ ಎನ್ನುವುದನ್ನು ಕೇಂದ್ರ ಗೃಹ ಸಚಿವರಾದ ಅಮಿತ್ ಶಾ ಹಾಗೂ ದಕ್ಷಿಣದ ಉಳಿದ ರಾಜ್ಯಗಳ ಮುಖ್ಯಮಂತ್ರಿಗಳ ಉಪಸ್ಥಿತಿಯಲ್ಲಿ ಪ್ರಸ್ತಾಪಿಸಿದ್ದಾರೆ. ನಮ್ಮ ದಕ್ಷಿಣ ರಾಜ್ಯಗಳು ದೇಶದ ಅಭಿವೃದ್ಧಿಯ ಪಾಲುದಾರರು, ನಮಗೆ ನಮ್ಮ ಪಾಲಿನ ಅನುದಾನದಲ್ಲಿ, ನಮ್ಮ ತೆರಿಗೆ ಪಾಲಿನಲ್ಲಿ ನೀಡಬೇಕಾದನ್ನು, ನ್ಯಾಯವಾಗಿ ಬರಬೇಕಾದನ್ನು ನೀಡಿ ಎಂದು ಗಟ್ಟಿ ಧ್ವನಿಯಲ್ಲಿ ಹೇಳಿದ್ದಾರೆ.

ಇಲ್ಲಿ ಗಮನಿಸಬೇಕಾದದ್ದು, ನಮ್ಮ ಮುಖ್ಯಮಂತ್ರಿಗಳು ಯಾವುದೇ ದೂರು, ಅಹವಾಲು ಸಲ್ಲಿಸುವ ಬದಲು ನ್ಯಾಯದ ಧ್ವನಿಯಲ್ಲಿ ಗಟ್ಟಿಯಾಗಿ ಮಾತನಾಡಿರುವುದನ್ನು. ಹಾಗೆ ನೋಡಿದರೆ ನಮ್ಮ ದಕ್ಷಿಣದ ಐದು ರಾಜ್ಯಗಳು ಭಾರತದ ಒಟ್ಟು ಜನಸಂಖ್ಯೆಯ ಸುಮಾರು ಶೇ.20ರಷ್ಟನ್ನು ಹೊಂದಿದ್ದರೂ, ದೇಶದ ಒಟ್ಟು ಜಿಡಿಪಿಗೆ ಸುಮಾರು ಶೇ.33ರಷ್ಟು ಕೊಡುಗೆ ನೀಡುತ್ತಿವೆ. ಅಂದರೆ, ದೇಶದ ಒಟ್ಟಾರೆ ಆರ್ಥಿಕತೆಯಲ್ಲಿ ಉತ್ಪತ್ತಿಯಾಗುವ ಪ್ರತಿ ಮೂರು ರೂಪಾಯಿಗಳಲ್ಲಿ ಒಂದು ರೂಪಾಯಿ ದಕ್ಷಿಣ ಭಾಗದಿಂದ ಬರುತ್ತದೆ. ಅದರಲ್ಲೂ ದೇಶದ ಆರ್ಥಿಕತೆಗೆ ಬಹು ದೊಡ್ಡ ಪಾಲು ಕೊಡುಗೆ ನಮ್ಮ ರಾಜ್ಯದಿಂದಲೇ ಬರುತ್ತಿದೆ. ಇದು ನಮ್ಮ ರಾಜ್ಯ ದೇಶದ ಅತ್ಯಂತ ಬಲಿಷ್ಠ ಆರ್ಥಿಕ ಚಾಲಕ ಶಕ್ತಿಗಳಲ್ಲಿ ಒಂದಾಗಿರುವುದನ್ನು ತೋರಿಸುತ್ತದೆ. ಅದರೆ, ಕಳೆದ ಹಲವು ವರ್ಷಗಳಿಂದ ನಮ್ಮ ರಾಜ್ಯಕ್ಕೆ ಬರಬೇಕಾದ ಅನುದಾನವಾಗಲಿ, ತೆರಿಗೆ ಪಾಲಾಗಲಿ ನ್ಯಾಯಯುತವಾಗಿ ಬರುತ್ತಿಲ್ಲ ಎನ್ನುವುದನ್ನು ಅತ್ಯಂತ ನೋವಿನಿಂದಲೇ ಹೇಳಬೇಕಾಗಿದೆ.

ಕಳೆದ ವರ್ಷದ ಏಪ್ರಿಲ್–ಜೂನ್ ತ್ರೈಮಾಸಿಕದಲ್ಲಿ, ದೇಶದ ಆರ್ಥಿಕತೆಯು ಶೇ. 6.9ರಷ್ಟು ಬೆಳವಣಿಗೆಯನ್ನು ದಾಖಲಿಸಿದ್ದರೆ, 2027ನೇ ಆರ್ಥಿಕ ವರ್ಷದ ಮೊದಲ ತ್ರೈಮಾಸಿಕದ ಜಿಡಿಪಿ ಅಂಕಿ–ಅಂಶಗಳ ಪ್ರಕಾರ ಬರೋಬ್ಬರಿ ಶೇ. 7.8ರಷ್ಟು ವೃದ್ಧಿಯನ್ನು ದಾಖಲಿಸಿದೆ. ಇದು ಸಂಭ್ರಮಿಸಬೇಕಾದ ವಿಷಯ. ಆದರೆ, ಹೀಗೆ ದೇಶದ ಜಿಡಿಪಿಯಲ್ಲಿ ದಾಪುಗಾಲು ಹಾಕಲು ನಮ್ಮ ರಾಜ್ಯದ ಕೊಡುಗೆಯೇ ಶೇ.9ರಷ್ಟಿದೆ. ನಮ್ಮ ರಾಜ್ಯದ ತಲಾ ಜಿಡಿಪಿ ದೇಶದಲ್ಲೇ ಅತ್ಯಧಿಕವಾಗಿದ್ದು, ದೇಶದ ತಲಾ ಜಿಡಿಪಿಗಿಂತಲೂ ಸುಮಾರು ಎರಡು ಪಟ್ಟು ಹೆಚ್ಚಾಗಿರುವುದನ್ನು ಇನ್ನೂ ಸಂಭ್ರಮಿಸಬೇಕಾದ ವಿಷಯ.

ಆದ್ದರಿಂದ ಕೇಂದ್ರ ಸರ್ಕಾರವು ದೇಶದ ಆರ್ಥಿಕತೆಯನ್ನು ಮುನ್ನಡೆಸುತ್ತಿರುವ ನಮ್ಮ ರಾಜ್ಯಕ್ಕೆ ನ್ಯಾಯಯುತವಾಗಿ ಸಲ್ಲಬೇಕಾದ ಪಾಲನ್ನು ನೀಡಿದಲ್ಲಿ, ಮುಂದಿನ ದಿನಗಳಲ್ಲಿ ನಮ್ಮ ರಾಜ್ಯವು ದೇಶದ ಆರ್ಥಿಕತೆಗೆ ಇನ್ನಷ್ಟು, ಮತ್ತಷ್ಟು ಕೊಡುಗೆಯನ್ನು ನೀಡಲಿರುವುದು ಮಾತ್ರವಲ್ಲ ದೇಶವನ್ನು ಆರ್ಥಿಕವಾಗಿ ಪ್ರಗತಿ ಪಥದಲ್ಲಿ ಮುನ್ನಡೆಸಲು ಸಹಕರಿಸಲಿದೆ ಎಂದು ತಿಳಿಸ ಬಯಸುತ್ತೇನೆ. ದೇಶದ ಪ್ರಬಲ ಆರ್ಥಿಕ ಶಕ್ತಿಯೇ ನಮ್ಮ ಕರ್ನಾಟಕ ಎನ್ನುವುದನ್ನು ಕೇಂದ್ರ ಸರ್ಕಾರ ಅರಿತು ನಮ್ಮೊಂದಿಗೆ ಸೂಕ್ತವಾಗಿ ಸ್ಪಂದಿಸಲಿ ಹಾಗೂ ಸಹಕರಿಸಲಿ ಎಂದು ಆಶಿಸುತ್ತೇನೆ.

ಎಚ್.ಕೆ. ಪಾಟೀಲ

## ದಾಸೋಹ ನಿಧಿಗೆ ಕಾಣಿಕೆ ಸಮರ್ಪಣೆ



**ತುಮಕೂರು:** ಸಿದ್ಧಗಂಗಾ ಅರ್ಬನ್ ಕೋ–ಆಪರೇಟಿವ್ ಬ್ಯಾಂಕ್ ನಿಯಮಿತ, ಡಾ॥ ಶ್ರೀ ಶ್ರೀ ಶಿವಕುಮಾರ ಸ್ವಾಮೀಜಿ ರಸ್ತೆ (ಬಿ. ಹೆಚ್. ರಸ್ತೆ), ತುಮಕೂರು–572 102 ಇಲ್ಲಿ 2025–26ನೇ ಸಾಲಿನ 33ನೇ ಸರ್ವಸದಸ್ಯರ ವಾರ್ಷಿಕ ಮಹಾಸಭೆಯ ಅಂಗವಾಗಿ ಶ್ರೀ ಸಿದ್ಧಗಂಗಾ ಮಠಾಧ್ಯಕ್ಷರಾದ ಶ್ರೀ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರ ಪಾದಪೂಜೆಯನ್ನು ನೆರವೇರಿಸಿ ಶ್ರೀ ಸಿದ್ಧಗಂಗಾ ಮಠದ ದಾಸೋಹ ನಿಧಿಗಾಗಿ ಕಾಣಿಕೆಯನ್ನು ಸಮರ್ಪಿಸಲಾಯಿತು ಮತ್ತು ಪೂಜ್ಯರಿಂದ ಬ್ಯಾಂಕಿನ ಅಧಿಕೃತ ಜಾಲತಾಣ (ವೆಬ್‌ಸೈಟ್)ವನ್ನು ಉದ್ಘಾಟಿಸಲಾಯಿತು.

ಅಧ್ಯಕ್ಷರಾದ ಶ್ರೀ ಟಿ.ಕೆ. ನಂಜುಂಡಪ್ಪನವರು ಉಪಾಧ್ಯಕ್ಷರಾದ ಶ್ರೀ. ಕೆ. ಎಸ್. ಶಂಕರಯ್ಯನವರು ವ್ಯವಸ್ಥಾಪನಾ ಮಂಡಳಿ ಅಧ್ಯಕ್ಷರು ಮತ್ತು ಬ್ಯಾಂಕಿನ ನಿರ್ದೇಶಕರಾದ ಶ್ರೀ. ಬಿ. ಎಸ್. ರುದ್ರೇಶಯ್ಯನವರು, ನಿರ್ದೇಶಕರುಗಳಾದ ಶ್ರೀ. ಮಹೇಶಪ್ಪನವರು, ಡಾ. ಎಸ್. ಪರಮೇಶ್‌ರವರು, ಡಾ॥ ಆರ್. ಸಿ. ಪುಟ್ಟಬುದ್ಧಿರವರು, ಡಾ॥ ಶಿವಕುಮಾರಯ್ಯನವರು, ಶ್ರೀ. ಟಿ. ಎಂ. ಸ್ವಾಮಿರವರು, ಶ್ರೀ. ಆರ್. ಚಿಕ್ಕಯ್ಯನವರು, ಶ್ರೀ. ಎಸ್. ವಿಶ್ವನಾಥ್‌ರವರು ಚಾರ್ಟರ್ಡ್ ಅಕೌಂಟೆಂಟ್, ಶ್ರೀ. ಕೆ. ಎಂ. ಸ್ವಾಮಿರವರು, ಶ್ರೀ. ರಾಮಯ್ಯನವರು, ಶ್ರೀಮತಿ ಮಂಜುಳ ಪ್ರಸಾದ್‌ರವರು, ಡಾ॥ ಎಸ್. ರೇಣುಕಲತಾರವರು, ವ್ಯವಸ್ಥಾಪನಾ ಮಂಡಳಿ ಸದಸ್ಯರುಗಳಾದ ಶ್ರೀ. ಎಸ್. ವಿಶ್ವನಾಥಯ್ಯನವರು, ಪ್ರೊ. ಪಿ. ಪರಮಶಿವಯ್ಯನವರು, ಶ್ರೀ. ಸಿ. ಆರ್. ರಮೇಶ್‌ರವರು, ಮುಖ್ಯಕಾರ್ಯನಿರ್ವಹಣಾಧಿಕಾರಿಗಳಾದ ಶ್ರೀ. ಹೆಚ್. ಕೆ. ಶಿವಪ್ರಕಾಶ್‌ರವರು ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

...1ನೇ ಪುಟದಿಂದ




ಅಭಿವೃದ್ಧಿಪಡಿಸುವಂತೆ NUCFDCಗೆ ಮನವಿ ಮಾಡಿದರು.

ನ್ಯಾಫಕಬ್‌ನ ಪ್ರೆಸಿಡೆಂಟ್ ಎಮೆರಿಟಸ್ ರವರಾದ ಶ್ರೀ ಎಚ್.ಕೆ. ಪಾಟೀಲ ರವರು ಒಕ್ಕೂಟದ ಐದು ದಶಕಗಳ ಪ್ರಯಾಣವನ್ನು ಪ್ರತಿಬಿಂಬಿಸಿದರು, ನ್ಯಾಫಕಬ್ ಬಾಡಿಗೆ ಕಚೇರಿಯಿಂದ ಸಹಕಾರಿ ಬ್ಯಾಂಕಿಂಗ್ ವಲಯಕ್ಕೆ ಪ್ರಮುಖ ಸಾಂಸ್ಥಿಕ ವೇದಿಕೆಯಾಗಿ ಹೇಗೆ ವಿಕಸನಗೊಂಡಿತು ಎಂಬುದನ್ನು ನೆನಪಿಸಿಕೊಂಡರು.

NAFCUB ತನ್ನ ರಚನೆಯ ವರ್ಷಗಳಲ್ಲಿ ಅದನ್ನು ಬೆಂಬಲಿಸಿದ ಹಲವಾರು ಸಹಕಾರಿ ನಾಯಕರು ಮತ್ತು ಸಾರ್ವಜನಿಕ ವ್ಯಕ್ತಿಗಳ ಕೊಡುಗೆಯನ್ನು ಪಾಟೀಲರು ಎತ್ತಿ ತೋರಿಸಿದರು. SAC ಸಮಿತಿಯ ಸ್ಥಾಪನೆಯು ಒಂದು ಪ್ರಮುಖ ಮೈಲಿಗಲ್ಲು ಎಂದು ಅವರು ಬಣ್ಣಿಸಿದರು. ಇದು ಸರ್ಕಾರ, ಆರ್‌ಬಿಐ, ನ್ಯಾಫಕಬ್, ರಾಜ್ಯ ಮಹಾಮಂಡಳಗಳು ಮತ್ತು ಇತರ ಪಾಲುದಾರರಿಗೆ ತಳಮಟ್ಟದ ಸವಾಲುಗಳನ್ನು ಚರ್ಚಿಸಲು ಒಂದು ವೇದಿಕೆಯನ್ನು ಒದಗಿಸುತ್ತದೆ.

ಸಾರಸ್ವತ್ ಬ್ಯಾಂಕ್, ಕಾಸ್ಮೋಸ್ ಬ್ಯಾಂಕ್ ಮತ್ತು ರಾಜ್‌ಕೋಟ್ ನಾಗರಿಕ್ ಸಹಕಾರಿ ಬ್ಯಾಂಕ್‌ನಂತಹ ಸಂಸ್ಥೆಗಳ ಬೆಳವಣಿಗೆಯನ್ನು ಸೂಚಿಸಿದ ಶ್ರೀ ಎಚ್. ಕೆ. ಪಾಟೀಲರು, NAFCUBನ ಪ್ರಯಾಣವು ಸಹಕಾರಿ ಮಾದರಿಯ ಬಲ ಮತ್ತು ಅದರ ಆಳವಾದ ಸಮುದಾಯ ಸಂಪರ್ಕವನ್ನು ಪ್ರತಿಬಿಂಬಿಸುತ್ತದೆ ಎಂದು ಹೇಳಿದರು.

ಸುವರ್ಣ ಮಹೋತ್ಸವ ವರ್ಷವು ಕೇವಲ ಭೂತಕಾಲದ ಆಚರಣೆಯಾಗ ಬಾರದು, ಬದಲಾಗಿ ಭಾರತದ ಪಟ್ಟಣ ಸಹಕಾರಿ ಬ್ಯಾಂಕಿಂಗ್ ಆಂದೋಲನಕ್ಕೆ ಬಲವಾದ ಮತ್ತು ಹೆಚ್ಚು ಸಮರ್ಥ ಭವಿಷ್ಯವನ್ನು ನಿರ್ಮಿಸುವ ಅವಕಾಶವಾಗಿರಬೇಕು ಎಂದು ಅವರು ಹೇಳಿದರು.

ಇದೇ ಸಂದರ್ಭದಲ್ಲಿ ಭಾರತದಾದ್ಯಂತ ಪಟ್ಟಣ ಸಹಕಾರಿ ಬ್ಯಾಂಕುಗಳ (UCBs) ಸಮಗ್ರ ಮತ್ತು ನವೀಕರಿಸಿದ ಡೇಟಾಬೇಸ್ ರಚಿಸಲು ರಾಷ್ಟ್ರೀಯ ಪಟ್ಟಣ ಸಹಕಾರ ಬ್ಯಾಂಕುಗಳ ಮತ್ತು ಪತ್ತಿನ ಸಂಘಗಳ ಮಹಾಮಂಡಳ (NAFCUB) ತನ್ನ ಡೇಟಾ ಸೆಂಟರ್ ಪೋರ್ಟಲ್ ಅನ್ನು ಪ್ರಾರಂಭಿಸಿದೆ.

ಈ ವಾರ್ಷಿಕ ಸರ್ವಸದಸ್ಯರ ಮಹಾಸಭೆಯಲ್ಲಿ ನ್ಯಾಫಕಬ್‌ನ ಉಪಾಧ್ಯಕ್ಷರುಗಳಾದ ಶ್ರೀ ಮುದಿತ್ ವರ್ಮಾ, ಸಿಎ ಮಿಲಿಂದ ಕಾಳೆ, ನಿರ್ದೇಶಕರುಗಳಾದ ಶ್ರೀ ಜ್ಯೋತೀಂದ್ರ ಎಂ. ಮೆಹ್ತಾ, ಶ್ರೀ ಕೆ. ಜಯವರ್ಮಾ, ಶ್ರೀ ವೇಮಿರೆಡ್ಡಿ ನರಸಿಂಹ ರೆಡ್ಡಿ, ಸಿಎ ಅಜಯ ಬ್ರಹ್ಮೇಚ್, ಶ್ರೀ ಒ.ಪಿ. ಶರ್ಮಾ, ಶ್ರೀ ಎ.ಎಂ.ಹಿಂಡಸಗೇರಿ, ಶ್ರೀ ಗೌತಮಬಾಯಿ ಉಮಿಯಾಶಂಕರ್ ವ್ಯಾಸ್, ಶ್ರೀ ಕೆ. ಕಾಳಪ್ಪ, ಶ್ರೀಮತಿ ಅಲಕಾ ಶ್ರೀವಾಸ್ತವ, ಶ್ರೀ ಛಲಸನಿ ರಾಘವೇಂದ್ರ ರಾವ್, ಶ್ರೀ ಜ್ಞಾನಚಂದ ಲಕ್ಷ್ಮಣದಾಸಜಿ ಗಾರ್ಗ, ಶ್ರೀ ಕಂಜೀಬಾಯಿ ರಾಘವಬಾಯಿ ಬಲಾಲ್, ಶ್ರೀ ಕಾಂತಿಬಾಯಿ ಎಲ್. ಪಟೇಲ್, ಡಾ॥ ಉದಯ ವಿ. ಜೋಶಿ, ಶ್ರೀ ದಿಲೀಪ್ ಸಂಘಾನಿ, ಶ್ರೀ ಎನ್.ಎಸ್. ಜಯಕುಮಾರ್, ಶ್ರೀ ಮದನ ಗೋಪಾಲ ಸ್ವಾಮಿ, ಶ್ರೀ ಸುನಿಲ ಒ.ಪಿ. ದಿಯೋರಾ, ಶ್ರೀ ಮೋಹನ ಪರಶರ, ಶ್ರೀ ನರಣದಾಸ್ ವಿ. ಪಟೇಲ, ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ರಾಕೇಶ್ ಕುಮಾರ್ ದುವಾ ಮತ್ತು ದೇಶದ ವಿವಿಧ ಭಾಗಗಳಿಂದ ಪಟ್ಟಣ ಸಹಕಾರ ಬ್ಯಾಂಕುಗಳ ಪ್ರತಿನಿಧಿಗಳು, ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳ ಪ್ರತಿನಿಧಿಗಳು ಉಪಸ್ಥಿತರಿದ್ದರು. ನ್ಯಾಫಕಬ್‌ನ ಉಪಾಧ್ಯಕ್ಷ ಸಿಎ ಮಿಲಿಂದ್ ಕಾಳೆ ಧನ್ಯವಾದ ಅರ್ಪಿಸಿದರು.

## ಚಾರ್ಟರ್ಡ್ ಸಹಕಾರಿ ಬ್ಯಾಂಕ್ : 26ನೇ ವಾರ್ಷಿಕ ಸರ್ವಸದಸ್ಯರ ಸಭೆ




**ಬೆಂಗಳೂರು:** ಚಾರ್ಟರ್ಡ್ ಸಹಕಾರಿ ಬ್ಯಾಂಕಿನ 2025–26ನೇ ಸಾಲಿನ 26ನೇ ವಾರ್ಷಿಕ ಸರ್ವಸದಸ್ಯರ ಸಭೆಯು ಅಧ್ಯಕ್ಷರಾದ ಎಂ. ಮುನಿರೆಡ್ಡಿ ರವರ ಅಧ್ಯಕ್ಷತೆಯಲ್ಲಿ ದಿನಾಂಕ : 26.07.2026 ರಂದು ಸೈಂಟ್ ಜಾನ್ಸ್ ಆಡಿಟೋರಿಯಂ, ಕೋರಮಂಗಲ, ಬೆಂಗಳೂರು ಇಲ್ಲಿ ಜರುಗಿತು. ಈ ಸಭೆಯಲ್ಲಿ ಬ್ಯಾಂಕಿನ ಉಪಾಧ್ಯಕ್ಷರಾದ ನಾರಾಯಣ ಎಸ್. ಭಟ್, ನಿರ್ದೇಶಕರುಗಳಾದ ಪಿ.ವಿ. ವೆಂಕಟೇಶ ಅಯ್ಯರ್, ಜೆ. ನಾಗೇಶ್ವರ ರಾವ್, ಕೆ.ರವೀಂದ್ರ, ಜಿ.ಎನ್. ಮುನಿವೆಂಕಟಪ್ಪ, ಗುರುಮೂರ್ತಿ ರೆಡ್ಡಿ, ಎಂ. ಮುರಳೀಧರ್, ಡಿ. ಪೃಥ್ವಿರಾಜ್, ಗೋವಿಂದಪ್ಪ ಕೆ.ಜಿ. ನರಸಿಂಹಮೂರ್ತಿ ಎ.ಎಂ., ಕಿಶೋರ್‌ಕುಮಾರ್ ಎಸ್.ಆರ್., ಪಿ. ವರಲಕ್ಷ್ಮಿ, ಉಮಾದೇವಿ ಕೆ., ಅಶೋಕ್ ಎಂ.ಡಿ., ಪ್ರಾರಂಭಿಕ ಅಧ್ಯಕ್ಷರಾದ ಎಂ. ನಾಗರಾಜ, ವ್ಯವಸ್ಥಾಪನಾ ಮಂಡಳಿ ಸದಸ್ಯರಾದ ಡಾ॥ ಮುನಿರೆಡ್ಡಿ ಆರ್, ಭಾಸ್ಕರ್ ಕೃಷ್ಣ, ಯೋಗೇಶ್ ವಿ. ಕೃಷ್ಣ, ನರಸಿಂಹನ್ ಕೆ., ಬ್ಯಾಂಕಿನ ಸದಸ್ಯರು ಹಾಗೂ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಟೆಕ್ಸ್‌ಟೈಲ್ ಕೋ-ಆಪರೇಟಿವ್ ಬ್ಯಾಂಕ್ ಲಿ., ಬೆಂಗಳೂರು : 63ನೇ ಸರ್ವ ಸದಸ್ಯರ ವಾರ್ಷಿಕ ಸಭೆ




**ಬೆಂಗಳೂರು:** ಟೆಕ್ಸ್‌ಟೈಲ್ ಕೋ–ಆಪರೇಟಿವ್ ಬ್ಯಾಂಕ್ ಲಿ., ಬೆಂಗಳೂರು. ಇದರ 2025–26ನೇ ಸಾಲಿನ 63ನೇ ಸರ್ವ ಸದಸ್ಯರ ವಾರ್ಷಿಕ ಸಭೆಯು ದಿನಾಂಕ : 02.08.2026 ರಂದು ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಎಣ್ಣೆಗೆರೆ ಆರ್. ವೆಂಕಟರಾಮಯ್ಯ (ವೈ.ವಿ.ರಾಜು)ರವರ ಅಧ್ಯಕ್ಷತೆಯಲ್ಲಿ ಜರುಗಿತು. ಈ ಸಭೆಯಲ್ಲಿ ಬ್ಯಾಂಕಿನ ಉಪಾಧ್ಯಕ್ಷರಾದ ಡಾ॥ ಟಿ.ಎಸ್.ಕೃಷ್ಣಮೂರ್ತಿ (ಜರಿಕೃಷ್ಣ) ರವರು, ನಿರ್ದೇಶಕರುಗಳು, ಪ್ರಭಾರ ಮುಖ್ಯಕಾರ್ಯನಿರ್ವಾಹಕರು ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಎಣ್ಣೆಗೆರೆ ಆರ್. ವೆಂಕಟರಾಮಯ್ಯ (ವೈ.ವಿ.ರಾಜು) ರವರು ಮಾತನಾಡಿ, ಬ್ಯಾಂಕು 2025–26ನೇ ಸಾಲಿನಲ್ಲಿ ರೂ.406.55 ಕೋಟಿಗಳಷ್ಟು ಠೇವಣಿ, ರೂ.215.36 ಕೋಟಿಗಳಷ್ಟು ಸಾಲ ಮತ್ತು ಮುಂಗಡಗಳು, ರೂ.221.77 ಕೋಟಿಗಳಷ್ಟು ಗುಂತಾವಣಿಗಳು ಮತ್ತು ರೂ.460.01 ಲಕ್ಷಗಳಷ್ಟು ದುಡಿಯುವ ಬಂಡವಾಳ ಹೊಂದಿದ್ದು, ರೂ.3.39 ಕೋಟಿಗಳಷ್ಟು ನಿವ್ವಳ ಲಾಭಗಳಿಸಿರುವುದನ್ನು ವಿವರಿಸಿ, ಸದಸ್ಯರುಗಳಿಗೆ ಶೇ.16 ರಂತೆ ಡಿವಿಡೆಂಡ್‌ನ್ನು ಘೋಷಿಸಿದರು.

## ದಿ ರೈಲ್ವೆ ಕೋ–ಆಪರೇಟಿವ್ ಬ್ಯಾಂಕ್ : 107ನೇ ಸರ್ವಸದಸ್ಯರ ವಾರ್ಷಿಕ ಮಹಾಸಭೆ




**ಮೈಸೂರು** : ದಿ ರೈಲ್ವೆ ಕೋ–ಆಪರೇಟಿವ್ ಬ್ಯಾಂಕಿನ 107ನೇ ಸರ್ವಸದಸ್ಯರ ವಾರ್ಷಿಕ ಮಹಾಸಭೆಯು ನಗರದ ಅಮೃತ ಮಹೋತ್ಸವ ಭವನ, ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಎಂ.ಎಂ.ಸಿ, ಅಲುಮ್ನೆ ಅಸೋಸಿಯೇಷನ್, ಜೆ.ಕೆ. ಮೈದಾನ, ಮೈಸೂರಿನಲ್ಲಿ ಜರುಗಿದ್ದು ಬ್ಯಾಂಕ್ 2025–26ನೇ ಸಾಲಿನ ಹಣಕಾಸು ವರ್ಷದಲ್ಲಿ ರೂ.10,35,72,637.34ಗಳ ಲಾಭಗಳಿಸಿರುವುದನ್ನು ಹೆಮ್ಮೆಯಿಂದ ಪ್ರಕಟಿಸಲಾಯಿತು.

ಸಭೆಯಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಡಾ. ಎಂ.ಬಿ.ಮಂಜೇಗೌಡರವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದು, ಉಪಾಧ್ಯಕ್ಷರಾದ ಡಾ. ಆನಂದ ಎಸ್. ರವರು ಹಾಗೂ ನಿರ್ದೇಶಕರುಗಳಾದ ಶ್ರೀ ಹನುಮಂತ, ಶ್ರೀ ಯೋಗಾನಂದ ಎಂ.ಬಿ., ಶ್ರೀ ಮುತ್ತುಕುಮಾರ್ ಎಸ್., ಶ್ರೀ ಚಂದ್ರಶೇಖರ ಆರ್., ಶ್ರೀ ಯತಿರಾಜು ಎಂ., ಶ್ರೀ ರಾಮನಾದನ್ ಸಿ., ಶ್ರೀ ಮಂಜುನಾಥ ಸಿ.ಹೆಚ್., ಶ್ರೀ ಶಿವಶಂಕರ್ ಸಿ., ಶ್ರೀ ಉತ್ತೇಜ್ ಎಸ್., ಶ್ರೀಮತಿ ಶ್ವೇತಾ ಎಸ್., ಶ್ರೀಮತಿ ನಿರ್ಮಲ ಸಿ., ಶ್ರೀ ಚಂದ್ರಶೇಖರ್ ಪಿ., ಶ್ರೀ ನಂದಕುಮಾರ್ ಎನ್.ಎಸ್., ರವರುಗಳು ಮತ್ತು ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾಧಿಕಾರಿಯವರಾದ ಶ್ರೀ ನಾರಾಯಣ ಎಸ್.ಜೆ., ಜನರಲ್ ಮ್ಯಾನೇಜರ್‌ರವರಾದ ಶ್ರೀ ಲಕ್ಷ್ಮೀಪ್ರಸಾದ್ ಎಂ.ಸಿ. ಮತ್ತು ಶ್ರೀ ಸತ್ಯನಾರಾಯಣ ಹೆಚ್.ಸಿ., ಎಲ್ಲಾ ಸದಸ್ಯರು ಮತ್ತು ಬ್ಯಾಂಕಿನ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಯಶಸ್ವಿಗೆ ಕಾರಣರಾದ ಸದಸ್ಯರು, ಠೇವಣಿದಾರರು, ಗ್ರಾಹಕರು ಮತ್ತು ಸಿಬ್ಬಂದಿಗಳಿಗೆ ಧನ್ಯವಾದಗಳನ್ನು ಸಲ್ಲಿಸಿದರು, ಮುಂದಿನ ದಿನಗಳಲ್ಲಿ ಇನ್ನಷ್ಟು ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೆತ್ತಿಕೊಳ್ಳುವುದಾಗಿ ಭರವಸೆ ನೀಡಿದರು.

## ಹೊನ್ನಾವರ ಅರ್ಬನ್ ಬ್ಯಾಂಕಿನ ಲೇಖಾಪಾಲರಾದ ಶ್ರೀ ದಿನೇಶ ವಿಷ್ಣು ಭಟ್ಟ ಹಾಗೂ ಬ್ಯಾಂಕಿನ ಸಿಪಾಯಿಯಾದ ಶ್ರೀ ಉಮೇಶ ವೆಂಕಟರಮಣ ನಾಯ್ಕ ರವರಿಗೆ ಬ್ಯಾಂಕಿನ ವತಿಯಿಂದ ಬೀಳ್ಕೊಡುಗೆ





**ಹೊನ್ನಾವರ :** ಕಳೆದ 30 ವರ್ಷ 5 ತಿಂಗಳಿನಿಂದ ಹೊನ್ನಾವರ ಅರ್ಬನ್ ಬ್ಯಾಂಕಿನಲ್ಲಿ ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸಿ, ಬ್ಯಾಂಕಿನ ಲೇಖಾಪಾಲರಾಗಿ ದಿನಾಂಕ: 31–08–2026 ರಂದು ನಿವೃತ್ತರಾಗುತ್ತಿರುವ ಶ್ರೀ ದಿನೇಶ ವಿಷ್ಣು ಭಟ್ಟರವರನ್ನು ಹಾಗೂ 26 ವರ್ಷ 3 ತಿಂಗಳಿನಿಂದ ಬ್ಯಾಂಕಿನ ಸಿಪಾಯಿಯಾಗಿ ಸೇವೆ ಸಲ್ಲಿಸಿದ ಶ್ರೀ ಉಮೇಶ ವೆಂಕಟರಮಣ ನಾಯ್ಕ ರವರನ್ನು ನಿರ್ದೇಶಕ ಮಂಡಲದ ಸದಸ್ಯರು ಹಾಗೂ ಬ್ಯಾಂಕಿನ ಸಿಬ್ಬಂದಿಗಳು ಜೊತೆಗೂಡಿ ಸನ್ಮಾನಿಸಿ ಶುಭ ಹಾರೈಸಿ ಬೀಳ್ಕೊಡಲಾಯಿತು.

## ದಿ ಮರ್ಚಂಟ್ಸ್ ಅರ್ಬನ್ ಕೋ-ಆಪ್‌ರೇಟಿವ್ ಬ್ಯಾಂಕಿನ 71ನೇ ವಾರ್ಷಿಕ ಸರ್ವಸಾಧಾರಣ ಸಭೆ



**ಗದಗ :** ದಿನಾಂಕ : 30.08.2026ರಂದು ದಿ ಮರ್ಚಂಟ್ಸ್ ಅರ್ಬನ್ ಕೋ–ಆಪರೇಟಿವ್ ಬ್ಯಾಂಕಿನ ಪ್ರಥಮ ಶಾಖೆಯನ್ನು ಕಳಸಾಪೂರ ರಸ್ತೆಯಲ್ಲಿ ಪ್ರಾರಂಭಿಸಲಾಗಿದ್ದು, ಉತ್ತಮವಾದ ವ್ಯವಹಾರವನ್ನು ಹೊಂದಿರುತ್ತದೆ. ಇಂದು ನಾಮಜೋಶಿ ರೋಡಿನಲ್ಲಿರುವ ನಮ್ಮ ಬ್ಯಾಂಕಿನ ಸ್ವಂತ ಕಟ್ಟಡದಲ್ಲಿ 2ನೇ ಶಾಖೆ ಇಂದು ಉದ್ಘಾಟನೆಗೊಂಡ ಈ ಐತಿಹಾಸಿಕ ಕ್ಷಣವು ಸಂಸ್ಥೆಯ ಬೆಳವಣಿಗೆಯ ಹಾದಿಯಲ್ಲಿ ಒಂದು ಮಹತ್ವದ ಮೈಲಿಗಲ್ಲು ಆಗಿದೆ. ಸದಸ್ಯರು, ಠೇವಣಿದಾರರು, ಗ್ರಾಹಕರು ಹಾಗೂ ಹಿತೈಷಿಗಳ ವಿಶ್ವಾಸ ಮತ್ತು ಸಹಕಾರದಿಂದ ಬ್ಯಾಂಕು ತನ್ನದೇ ಆದ ಸುಸಜ್ಜಿತ ಸ್ವಂತ ಕಟ್ಟಡವನ್ನು ಹೊಂದಿರುವುದು ನಮ್ಮೆಲ್ಲ ಹೆಮ್ಮೆಯ ಸಂಗತಿಯಾಗಿದೆ. ನಮ್ಮ ಸಂಸ್ಥಾಪಕರ ಭವನವು ಸಹಕಾರದ ಮೌಲ್ಯಗಳನ್ನು ಮತ್ತಷ್ಟು ಬಲಪಡಿಸುವುದು ಎಂದು ಸಿಎ. ಕೆ.ಎಸ್. ಚಟ್ಟಿಯವರು ತಿಳಿಸಿದರು.

ನಗರದ ಶ್ರೀ ಜಗದ್ಗುರು ಪಂಚಾಚಾರ್ಯ ಮಾಂಗಲ್ಯ ಮಂದಿರದಲ್ಲಿ ನಡೆದ ದಿ ಮರ್ಚಂಟ್ಸ್ ಅರ್ಬನ್ ಕೋ–ಆಪ್ ಬ್ಯಾಂಕಿನ 71ನೇ ವಾರ್ಷಿಕ ಸರ್ವ ಸಾಧಾರಣ ಸಭೆಯಲ್ಲಿ ಮಾತನಾಡಿ, ರಿಝರ್ವ ಬ್ಯಾಂಕಿನ ಕಟ್ಟುನಿಟ್ಟಿನ ಧೋರಣೆಗಳು ಪಾಲನೆ ಮಾಡಿಕೊಂಡು ಬ್ಯಾಂಕು ರೂ. 1 ಕೋಟಿ 16 ಲಕ್ಷ ಲಾಭ ಗಳಿಸಿದೆ ಎಂದು ತಿಳಿಸಿ ಬ್ಯಾಂಕಿನ ವಾರ್ಷಿಕ ವರದಿಯನ್ನು ಮಂಡಿಸಿ ಸಭೆಯ ಅನುಮೋದನೆಯನ್ನು ಬ್ಯಾಂಕಿನ ಅಧ್ಯಕ್ಷರಾದ ಸಿಎ. ಕೆ.ಎಸ್. ಚಟ್ಟಿಯವರು ಪಡೆದರು.

ಹಿಂದಿನ ವಾರ್ಷಿಕ ಮಹಾಸಭೆಯ ನಡವಳಿಕೆಗಳನ್ನು ಹಾಗೂ ಲೆಕ್ಕಪರಿಶೋಧನೆಯ ಅನುಪಾಲನಾ ವರದಿಯನ್ನು ಬ್ಯಾಂಕಿನ ವ್ಯವಸ್ಥಾಪಕರಾದ ಸಂತೋಷ ಎನ್ ಗಾಣಿಗೇರ ಮಂಡಿಸಿ ಸಭೆಯ ಒಪ್ಪಿಗೆಯನ್ನು ಪಡೆದರು.

ಯಶಸ್ವಿಯನ್ನುವುದು ಕೇವಲ ಒಂದು ಫಲಿತಾಂಶವಲ್ಲ ಅನೇಕ ವರ್ಷಗಳ ಶ್ರಮ, ತ್ಯಾಗ ಮತ್ತು ಸಂಕಲ್ಪ ಅದರಲ್ಲಿ ಅಡಗಿರುತ್ತದೆ ಅಂತಹ ಶ್ರೇಷ್ಠ ಬ್ಯಾಂಕಿನ ಸಂಸ್ಥಾಪಕರ ಸಂಕಲ್ಪದಂತೆ ನಿರ್ಮಿಸಲ್ಪಟ್ಟ ಈ ಕಟ್ಟಡಕ್ಕೆ "ಸಂಸ್ಥಾಪಕರ ಭವನ" ಎಂದು ನಾಮಕರಣವನ್ನು ಬಹು ಹೆಮ್ಮೆಯಿಂದ ಮಾಡಿದ್ದೆವೆ, ಈ "ಸಂಸ್ಥಾಪಕರ ಭವನದಲ್ಲಿ" ಬ್ಯಾಂಕಿನ 2ನೇ ಶಾಖೆಯನ್ನು ತೆರೆದು ಗ್ರಾಹಕರಿಗೆ ಉತ್ತಮ ವೇಗವಾದ ಹಾಗೂ ಆಧುನಿಕ ಬ್ಯಾಂಕಿಂಗ್ ಸೇವೆಯನ್ನು ಒದಗಿಸುವ ಆಶಯವನ್ನು ಹೊಂದಿದ್ದೇವೆ ಎಂದು ಬ್ಯಾಂಕಿನ ಉಪಾಧ್ಯಕ್ಷರಾದ ಚಂದ್ರು ಬಾಳಿಹಳ್ಳಿಮಠ ತಿಳಿಸಿದರು.

ಸದರಿ ಸಭೆಯಲ್ಲಿ ವೃತ್ತಿಪರ ನಿರ್ದೇಶಕರಾದ ಎಸ್. ಜಿ. ಪಲ್ಲೇದ, ಮಹೇಶ್ವರಿ ಪಾಟೀಲ ಮಹೇಂದ್ರಕರ ಹಾಗೂ ನಿರ್ದೇಶಕ ಮಂಡಳಿ ಸದಸ್ಯರಾದ ಎಸ್. ಜಿ. ಅರಮನಿ, ಎಸ್. ಎಸ್. ಪಟ್ಟಣಶೆಟ್ಟಿ, ಎ. ಎಸ್. ಹಂಜಗಿ, ಎಸ್. ಬಿ. ಗಡಾದ, ಐ. ಜಿ. ಮುದಗಲ್, ಎಮ್. ಎಸ್. ಕಂಪಗೌಡರ, ಎಸ್. ಆರ್. ಭೂಸನೂರಮಠ, ಎಲ್. ಬಿ. ತೋಟದ, ಶಾಂತಾ ಎಸ್. ಹಲವಾಗಲಿ, ಸುನೀತಾ ಎಸ್. ತಡಸ ಮತ್ತು ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

# ಮಂಡ್ಯ ಸಿಟಿ ಕೋ-ಆಪರೇಟಿವ್ ಬ್ಯಾಂಕಿನ 41ನೇ ವಾರ್ಷಿಕ ಮಹಾಸಭೆ



**ಮಂಡ್ಯ:** ದಿನಾಂಕ:23.08.2026ರಂದು ಮಂಡ್ಯ ಸಿಟಿ ಕೋ-ಆಪರೇಟಿವ್ ಬ್ಯಾಂಕಿನ 2025-26ನೇ ಸಾಲಿನ ಸರ್ವಸದಸ್ಯರ 41ನೇ ವಾರ್ಷಿಕ ಮಹಾಸಭೆಯು ಬ್ಯಾಂಕಿನ ಅಧ್ಯಕ್ಷರಾದ ಶ್ರೀ ತಿರುಮಲಾಚಾರಿ ರವರ ಅಧ್ಯಕ್ಷತೆಯಲ್ಲಿ ಜರುಗಿತು. ಈ ಸಂದರ್ಭದಲ್ಲಿ 2026ನೇ ಏಪ್ರಿಲ್‌ನಲ್ಲಿ ಎಸ್.ಎಸ್.ಎಲ್.ಸಿ., ಪರೀಕ್ಷೆ, ದ್ವಿತೀಯ ಪಿ.ಯು.ಸಿ ಪರೀಕ್ಷೆ ಮತ್ತು ಅಂತಿಮ ಪದವಿ ಪರೀಕ್ಷೆಯಲ್ಲಿ ಶೇ.85 ಹಾಗೂ ಅದಕ್ಕಿಂತ ಅಧಿಕ ಅಂಕಗಳಿಸಿ ಉತ್ತೀರ್ಣರಾದ, ಕ್ರೀಡೆಯಲ್ಲಿ ರಾಜ್ಯ ಹಾಗೂ ರಾಷ್ಟ್ರೀಯ ಮಟ್ಟದಲ್ಲಿ ಪ್ರಶಸ್ತಿ ಪಡೆದ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಮಾಡಲಾಯಿತು. ಬ್ಯಾಂಕಿನ ಉಪಾಧ್ಯಕ್ಷರಾದ ಶ್ರೀಮತಿ ಲತಾ ಸಿ., ಬ್ಯಾಂಕಿನ ನಿರ್ದೇಶಕರುಗಳಾದ ಶ್ರೀ ಹೆಚ್.ಅಶೋಕ, ಶ್ರೀ ಅನಿಲ್ ರಾಜ್ ಹೆಚ್.ಸಿ., ಶ್ರೀ ನಾಗೇಶ್ ಎನ್., ಶ್ರೀ ಮಹೇಶ್ ಎಂ., ಶ್ರೀ ರಾಘವೇಂದ್ರ ಪಿ.ಎಂ., ಶ್ರೀ ಸುರೇಶ ಬಿ.ಸಿ., ಶ್ರೀ ಸಿ. ಸುಂದರ, ಶ್ರೀ ಶಶಿಧರ್ ಎನ್., ಶ್ರೀಮತಿ ಡಿ.ಬಿ. ಪ್ರಮೀಳಾ, ಶ್ರೀ ಹೆಚ್.ಟಿ.ಜನಾರ್ಧನಸ್ವಾಮಿ, ಶ್ರೀ ಬಿ.ಜೆ. ಸೋಮಶೇಖರ್, ವೃತ್ತಿಪರ ನಿರ್ದೇಶಕರುಗಳಾದ ಶ್ರೀ ಸಿ.ಬೋರೇಗೌಡ, ಶ್ರೀ ಕೆ.ರಾಮಲಿಂಗೇಗೌಡ ರವರುಗಳು ಉಪಸ್ಥಿತರಿದ್ದರು.

# ಶ್ರೀ ಮಹಾಂತ ಶಿವಯೋಗಿ ಸಹಕಾರಿ ಬ್ಯಾಂಕ ಅ., ಮುರಗೋಡ

**ಮುರಗೋಡ** : ಶ್ರೀ ಮಹಾಂತ ಶಿವಯೋಗಿ ಸಹಕಾರಿ ಬ್ಯಾಂಕಿನ ಸನ್ 2025-26ರ ವಾರ್ಷಿಕ ಸರ್ವಸಾಧಾರಣ ಮಹಾಸಭೆಯು ದಿನಾಂಕ : 23-08-2026ರಂದು ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಶಂಕ್ರಯ್ಯ ಮಲ್ಲಯ್ಯನವರ ಇವರ ಘನ ಅಧ್ಯಕ್ಷತೆಯಲ್ಲಿ ಜರುಗಿತು. ಸದಸ್ಯರ, ಆಡಳಿತ ಮಂಡಳಿ ಮತ್ತು ಬ್ಯಾಂಕಿನ ಸಿಬ್ಬಂದಿಯ ಶ್ರಮದಿಂದ ಬ್ಯಾಂಕ್ ಈ ವರ್ಷ ರೂ.0.64 ಕೋಟಿ ಲಾಭ ಗಳಿಸಿದೆ.

ಪ್ರಸ್ತುತ 2026 ಮಾರ್ಚ್ 31ರ ಅಂಕಿ ಅಂಶಗಳು ದುಡಿಯುವ ಬಂಡವಾಳ ರೂ.78.94 ಕೋಟಿ, ಷೇರು ಬಂಡವಾಳ ರೂ.2.69 ಕೋಟಿ, ಕಾಯ್ದಿಟ್ಟ ನಿಧಿ ರೂ.6.72 ಕೋಟಿ, ಠೇವಣಿ ರೂ.66.62 ಕೋಟಿ, ಹೂಡಿಕೆಗಳು ರೂ.25.68 ಕೋಟಿ, ಸಾಲ & ಮುಂಗಡ ರೂ.43.78 ಕೋಟಿ, ಕೊಟ್ಟಿದ್ದು. ಬ್ಯಾಂಕಿನ GROSS NPA = 2.32% (NET NPA ಶೂನ್ಯಕ್ಕೆ) ಇಳಿದಿದೆ. ವರದಿ ವರ್ಷದಲ್ಲಿ ಬ್ಯಾಂಕು ರೂ.0.64 ಕೋಟಿ ಲಾಭಗಳಿಸಿದೆ. ಪ್ರಸ್ತುತ ವರ್ಷ ಸದಸ್ಯರಿಗೆ ಶೇ.10% ರಷ್ಟು ಡಿವಿಡೆಂಟ್ ಪಾವತಿಸಲು ಆಡಳಿತ ಮಂಡಳಿ ನಿರ್ದರಿಸಿದೆ. ಬ್ಯಾಂಕ್ ಗ್ರಾಹಕರಿಗೆ RTGS / NEFT ಸೌಲಭ್ಯ, SMSS ಸೌಲಭ್ಯ, ಕೋರ್ ಬ್ಯಾಂಕಿಂಗ್ ಸೌಲಭ್ಯವಿದ್ದು. ಮುಂದಿನ ದಿನಗಳಲ್ಲಿ ಗ್ರಾಹಕರಿಗೆ ಡಿಜಿಟಲ್ ಬ್ಯಾಂಕಿಂಗ್, ಎಟಿಎಂ ಸೌಲಭ್ಯ, ಮೊಬೈಲ್ ಬ್ಯಾಂಕಿಂಗ್, ಯುಪಿಐ ಸೌಲಭ್ಯಗಳನ್ನು ಶೀಘ್ರದಲ್ಲಿ ನೀಡಲಾಗುವುದು.






ಬ್ಯಾಂಕಿನ ವಾರ್ಷಿಕ ವರದಿಯ ಅಂಕಿ ಅಂಶಗಳನ್ನು ಪ್ರಧಾನ ವ್ಯವಸ್ಥಾಪಕರಾದ ಶ್ರೀ ವಿಜಯ ಪ್ರ ಪಟ್ಟಣಶೆಟ್ಟಿ ಯವರು ಓದಿದರು. ಕೃತಜ್ಞತೆಗಳು ಹಾಗೂ ಅಭಿನಂದನೆಗಳನ್ನು ಶ್ರೀ ಶಂಕ್ರಯ ಶಿ ಮಲ್ಲಯ್ಯನವರ ಹಾಗೂ ಬ್ಯಾಂಕಿನ ಏಳಿಗೆ & ಅಭಿವೃದ್ಧಿಯನ್ನು ಶ್ರೀ.ಮ.ನಿ. ಪ್ರ.ಸ್ವ. ಶ್ರೀ ನೀಲಕಂಠ ಮಹಾ ಸ್ವಾಮಿಗಳು ಮಾತನಾಡಿ ಆಶೀರ್ವದಿಸಿದರು.

# ವಿಜಯಪುರ ಜಿಲ್ಲಾ ಮಹಿಳಾ ಸಹಕಾರ ಬ್ಯಾಂಕ್ : 33ನೇ ವಾರ್ಷಿಕ ಸರ್ವ ಸಾಧಾರಣ ಸಭೆ ರೂ. 73.53 ಲಕ್ಷ ಲಾಭ



**ವಿಜಯಪುರ:** ದಿನಾಂಕ : 30.08.2026ರಂದು ವಿಜಯಪುರ ಜಿಲ್ಲಾ ಮಹಿಳಾ ಸಹಕಾರ ಬ್ಯಾಂಕಿನ 33ನೇ ವಾರ್ಷಿಕ ಸರ್ವ ಸಾಧಾರಣ ಸಭೆಯು ಬ್ಯಾಂಕಿನ ಅಧ್ಯಕ್ಷರಾದ ಶ್ರೀಮತಿ ಸೌಮ್ಯ ಎಮ್.ಕಲ್ಲೂರ ರವರ ಅಧ್ಯಕ್ಷತೆಯಲ್ಲಿ ಜರುಗಿತು. ಸಭೆಯಲ್ಲಿ ಅಧ್ಯಕ್ಷರು ಮಾತನಾಡಿ ಆಡಳಿತ ಮಂಡಳಿ ಮತ್ತು ಬ್ಯಾಂಕಿನ ಸಿಬ್ಬಂದಿ ಶ್ರಮದಿಂದ ಬ್ಯಾಂಕ್ ಈ ವರ್ಷ ರೂ.73.53 ಲಕ್ಷ ಲಾಭ ಗಳಿಸಿದೆ ಎಂದು ತಿಳಿಸಿದರು. ಪ್ರಸ್ತುತ 2026 ಮಾರ್ಚ್ 31ರ ವರ್ಷಾಂತ್ಯಕ್ಕೆ ದುಡಿಯುವ ಬಂಡವಾಳ ರೂ.7253.76 ಲಕ್ಷ, ಕಾಯ್ದಿಟ್ಟ ನಿಧಿ ರೂ.596.75 ಲಕ್ಷ ಆಗಿದೆ. ರೂ.5387.59 ಲಕ್ಷ ಠೇವಣಿ ಹೊಂದಿದೆ. ಷೇರು ಬಂಡವಾಳ ರೂ.150.00 ಲಕ್ಷ ಇದೆ. ಒಟ್ಟು 3630 ಸದಸ್ಯರಿದ್ದಾರೆ. ರೂ.3602.22ಲಕ್ಷ ಸಾಲ ನೀಡಲಾಗಿದೆ. ಪ್ರಸ್ತುತ ವರ್ಷ ಸದಸ್ಯರಿಗೆ ಶೇ.8ರಷ್ಟು ಡಿವಿಡೆಂಡ್ ಪಾವತಿಸಲು ಆಡಳಿತ ಮಂಡಳಿ ನಿರ್ಧರಿಸಿದೆ. ಸಭೆಯಲ್ಲಿ ಮೊಬೈಲ್ ಬ್ಯಾಂಕಿಂಗ್ ಸೌಲಭ್ಯ ಒದಗಿಸಲು ತಿಳಿಸಲಾಯಿತು.

ಸದಸ್ಯರ ಮಕ್ಕಳ ಪ್ರತಿಭಾವಂತ ವಿದ್ಯಾರ್ಥಿಗಳನ್ನು, ಉತ್ತಮ ಗ್ರಾಹಕರನ್ನು ಗುರುತಿಸಿ ಪ್ರಶಸ್ತಿ ನೀಡಿ ಬ್ಯಾಂಕಿನಿಂದ ಗೌರವಿಸಲಾಯಿತು. ಸಿಂದಗಿ ಶಾಖೆಯ ವ್ಯವಸ್ಥಾಪಕರು ಬ್ಯಾಂಕಿನ ವಾರ್ಷಿಕ ವರದಿಯನ್ನು ಓದಿದರು. ಈ ಸಂದರ್ಭದಲ್ಲಿ ಬ್ಯಾಂಕಿನ ಉಪಾಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರು ಹಾಗೂ ವ್ಯವಸ್ಥಾಪಕರು ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



## ಸಹಕಾರ ಶಿಕ್ಷಣ ನಿಧಿ ಸಲ್ಲಿಕೆ

**ಬೆಂಗಳೂರು :** ಮಹಾಲಕ್ಷ್ಮೀ ಕೋ-ಆಪರೇಟಿವ್ ಬ್ಯಾಂಕ್ ನಿ., ಉಡುಪಿ ಇದರ ಸಹಕಾರ ಶಿಕ್ಷಣ ನಿಧಿ ಚೆಕ್‌ನ್ನು ಬ್ಯಾಂಕಿನ ಸಹಾಯಕ ಪ್ರಧಾನ ವ್ಯವಸ್ಥಾಪಕರಾದ ಶ್ರೀಮತಿ ಶಾರಿಕಾ ಕಿರಣ ರವರು ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆಯವರಿಗೆ ಸಲ್ಲಿಸಿದರು.




## ನಿಮ್ಮ ಪ್ರಶ್ನೆ ನಮ್ಮ ಉತ್ತರ



**ಸುಧಾಕರ್ ಭಟ್,** ಬ್ಯಾಂಕಿಂಗ್ ಸಲಹೆಗಾರರು.

**01. ನಮ್ಮ ಬ್ಯಾಂಕಿನ ನಿರ್ದೇಶಕರು ಇನ್ನೊಂದು ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿಯ ನಿರ್ದೇಶಕರಾಗಿದ್ದು, ಆ ಸಂಸ್ಥೆಗೆ ಶಾಲಾ ವಾಹನದ ಅವಶ್ಯಕತೆ ಇರುತ್ತದೆ. ನಮ್ಮ ಬ್ಯಾಂಕಿನಿಂದ ಅವರಿಗೆ ಶಾಲಾ ವಾಹನದ ಸಾಲ ಮಂಜೂರು ಮಾಡಬಹುದೇ?**

**– ಪಟ್ಟಣ ಸಹಕಾರ ಬ್ಯಾಂಕ್ ಲಿ., ಹಾವೇರಿ ಜಿಲ್ಲೆ.**

**ಉತ್ತರ :** ದಿನಾಂಕ : ಏಪ್ರಿಲ್ 1, 2026ರಂದು ನವೀಕರಿಸಲಾದ ರಿಜರ್ವ್ ಬ್ಯಾಂಕಿನ ಕ್ರೆಡಿಟ್ ರಿಸ್ಕ್ ಮ್ಯಾನೇಜ್‌ಮೆಂಟ್ ನಿರ್ದೇಶನದಂತೆ, ಬ್ಯಾಂಕಿನ ನಿರ್ದೇಶಕರು ಇನ್ನೊಂದು ಸಂಸ್ಥೆಯ ನಿರ್ದೇಶಕರಾಗಿದ್ದರೆ, ಆ ಸಂಸ್ಥೆಯನ್ನು "ಸಂಬಂಧಿತ ವ್ಯಕ್ತಿ" ಎಂದು ಕರೆಯಲಾಗುತ್ತದೆ. ಆದ್ದರಿಂದ, ನಿರ್ದೇಶಕರಿಗೆ ಸಂಬಂಧಿಸಿದ ಸಂಸ್ಥೆಗೆ ಸಾಲವನ್ನು ನೀಡಲಾಗುವುದಿಲ್ಲ. ಆದಾಗ್ಯೂ, ನಿರ್ದೇಶಕರಿಗೆ ಸಂಬಂಧಿಸಿದ ಶಿಕ್ಷಣ ಸಂಸ್ಥೆ ಸಾರ್ವಜನಿಕ ಟ್ರಸ್ಟ್ (Public Trust) ಆಗಿದ್ದಲ್ಲಿ, ಆ ಟ್ರಸ್ಟಿಗೆ ಬ್ಯಾಂಕಿನಿಂದ ಸಾಲ ನೀಡಬಹುದು.

**02. ನಮ್ಮ ಬ್ಯಾಂಕು IFFCO Tokyo ಸಂಸ್ಥೆಯಲ್ಲಿ ಹೂಡಿಕೆ ಮಾಡಬಹುದೇ?**

**– ಪಟ್ಟಣ ಸಹಕಾರ ಬ್ಯಾಂಕ್ ಲಿ., ಬೆಂಗಳೂರು.**

**ಉತ್ತರ:** ಸಹಕಾರ ಸಂಘಗಳಿಗೆ ಅನ್ವಯವಾಗುವ ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆಯ ಕಲಂ 19ರ ಪ್ರಕಾರ, ಯಾವುದೇ ಸಹಕಾರ ಬ್ಯಾಂಕ್ ರಿಜರ್ವ್ ಬ್ಯಾಂಕಿನಿಂದ ವಿನಾಯಿತಿ ಪಡೆಯದ ಯಾವುದೇ ಸಹಕಾರ ಸಂಘದಲ್ಲಿ ಷೇರುಗಳನ್ನು ಹೊಂದಿರಬಾರದು. ನೀವು ತಿಳಿಸಿದ ಸಹಕಾರ ಸಂಘ ರಿಜರ್ವ್ ಬ್ಯಾಂಕಿನಿಂದ ವಿನಾಯಿತಿ ಪಡೆದಿದ್ದಲ್ಲಿ ವಿನಾಯಿತಿಯ ಪ್ರತಿಯನ್ನು ಪಡೆದು ಸಂಘದ ಷೇರುಗಳಲ್ಲಿ ಹೂಡಿಕೆ ಮಾಡಬಹುದು. ಆದಾಗ್ಯೂ, ಆ ಸಹಕಾರ ಸಂಘದಲ್ಲಿ ಯಾವುದೇ ಠೇವಣಿ ಇಡುವಂತಿಲ್ಲ.

# ಒನ್‌ಲೈನ್ ನ್ಯೂಸ್

ಈ ಪುಟದಲ್ಲಿನ ಸುದ್ದಿಗಳನ್ನು ಓದಿದ್ದೀರಾ...?
**ಕುತೂಹಲಕಾರಿಯಾದ ಸುದ್ದಿಗಳು** ನಿಮ್ಮ ಕಣ್ಣು ತಪ್ಪಿದ್ದರೆ, ಇಲ್ಲಿವೆ ಓದಿ.

- ಅಮೆರಿಕದ ಡೈಸನ್ ಕಂಪನಿ ಹಲ್ಲುಜ್ಜುವ ಬ್ರಶ್ ಒಂದನ್ನು ಪರಿಚಯಿಸಿದ್ದು, ಅದು ಬಾಯಿಯೊಳಗಿನ ಸ್ಕ್ಯಾನರ್‌ನಂತೆ ಕೆಲಸ ಮಾಡುತ್ತದೆ. ಇದರ ಬೆಲೆ 499.99 ಅಮೆರಿಕನ್ ಡಾಲರ್, ಅಂದರೆ ನಮ್ಮಲ್ಲಿ ರೂ. 47 ಸಾವಿರ ಆಗುತ್ತದೆ. ತನ್ನೊಳಗೆ ಕ್ಯಾಮೆರಾವನ್ನು ಹುದುಗಿಸಿಕೊಂಡಿರುವ ಈ ಬ್ರಶ್ ಕೃತಕ ಬುದ್ಧಿಮತ್ತೆ ಆಧರಿಸಿ ಕೆಲಸ ಮಾಡುತ್ತದೆ. ಮೌತ್‌ವಾಶ್ ಜೆಟ್ ಕೂಡಾ ಇದರಲ್ಲಿದೆ. ಪ್ಯಾರಿಸ್‌ನಲ್ಲಿ ಇತ್ತೀಚೆಗೆ ನಡೆದ ಕಾರ್ಯಕ್ರಮದಲ್ಲಿ ಜಾಗತಿಕ ಮಾರುಕಟ್ಟೆಗೆ ಇದು ಬಿಡುಗಡೆಗೊಂಡಿದೆ.
- ಬ್ಯಾಕ್ಟೀರಿಯಾ ಮತ್ತು ಇನ್ನಿತರ ಸಾಂಕ್ರಾಮಿಕ ರೋಗಗಳನ್ನು ಪತ್ತೆಹಚ್ಚಲು ಸೋಂಕಿತ ಅಂಗಾಂಶಗಳ ಗುಣಲಕ್ಷಣಗಳನ್ನು ಅಧ್ಯಯನ ಮಾಡಿ, ಸೋಂಕನ್ನು ಗುರುತಿಸಲಾಗುತ್ತಿತ್ತು. ಇಂದು ರೋಗಿಯಿಂದ ಬ್ಯಾಕ್ಟೀರಿಯಾ ಅಥವಾ ಸೋಂಕುಜೀವಿಯನ್ನು ಸಂಗ್ರಹಿಸಿ, ಅದರ ಡಿಎನ್ಎ ಅಥವಾ ಆರ್‌ಎನ್‌ಎಯನ್ನು ಬೇರ್ಪಡಿಸಿ ಪಿಸಿಆರ್, ಡಿಎನ್ಎ ಅನುಕ್ರಮ ವಿಶ್ಲೇಷಣೆ, ಕ್ರಿಸ್ಪರ್ ಮುಂತಾದ ಅಣುವಿಕ ತಂತ್ರಗಳ ಮೂಲಕ ತಗುಲಿದ ಸೋಂಕನ್ನು ಗುರುತಿಸುವ ವಿಧಾನಗಳನ್ನೂ ಅಭಿವೃದ್ಧಿಪಡಿಸಲಾಗಿದೆ.
- ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನ ಪುಷ್ಪಲತಾ ಅವರಿಗೆ ಚಿಕ್ಕಂದಿನಿಂದಲೂ ಸಸ್ಯಲೋಕದ ಮೇಲೆ ಅಪಾರ ಪ್ರೀತಿ. ಮನೆಯ ಹಿತ್ತಲಿನಲ್ಲಿ ಹೂವಿನ ಗಿಡಗಳನ್ನು ಬೆಳೆಸುತ್ತಿದ್ದ ಅವರು ಇಂದು ಪುಷ್ಪಗಿರಿ ನರ್ಸರಿಯ ಮಾಲೀಕರು. ಸಾವಿರಾರು ತಾವರೆ ಮತ್ತು ನೈದಿಲೆ ಪುಷ್ಪಗಳ ಸುಂದರ ಲೋಕವನ್ನೇ ಸೃಷ್ಟಿಸಿರುವ ಅವರು ಅದರಿಂದ ಉತ್ತಮ ಆದಾಯ ಗಳಿಸುತ್ತಿದ್ದಾರೆ. ಅವರಿಗೆ ಬೆಂಬಲವಾಗಿ, ಕಂದಾಯ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದ ಪತಿ ವಿಜಯಕುಮಾರ್ ತಮ್ಮ ಉದ್ಯೋಗಕ್ಕೆ ರಾಜೀನಾಮೆ ನೀಡಿ, ಪತ್ನಿಯ ಈ ಸಸ್ಯಲೋಕದ ಪಯಣದಲ್ಲಿ ಕೈಜೋಡಿಸಿದ್ದಾರೆ.
- ಥಾಣೆಯ ಗಣೇಶ್ ಸಾಠೇ ಚಾಟರ್ಡ್ ಅಕೌಂಟೆಂಟ್ ಆಗಬೇಕೆಂಬ ಆಸೆಯನ್ನು ಬದಿಗೊತ್ತಿ, ತಮ್ಮ ತಾಯಿ ಪ್ರತಿದಿನ ಮಾಡುತ್ತಿದ್ದ ಬೆಣ್ಣೆ ದೋಸೆಯನ್ನೇ ಉದ್ಯಮವಾಗಿ ಪರಿವರ್ತಿಸಲು ಥಾಣೆಯ ಕೋಲ್ಹೆಟ್ ರಸ್ತೆ ಬಳಿ ಬೆಣ್ಣೆ ದೋಸೆ ಅಂಗಡಿ ತೆರೆದರು. ಅಣ್ಣನ ಈ ಕೆಲಸಕ್ಕೆ ಸಹೋದರಿ ಸಪ್ನಾ ಸಾಠೆ ಕೂಡ ಸಾಥ್ ನೀಡಿದರು. ಇಂದು ಅವರು ದಿನಕ್ಕೆ ರೂ. 40 ಸಾವಿರಕ್ಕೂ ಹೆಚ್ಚು ದುಡಿಯುತ್ತಿದ್ದು, ತಿಂಗಳಿಗೆ ರೂ. 12 ಲಕ್ಷ ಆದಾಯ ಗಳಿಸುತ್ತಿದ್ದಾರೆ.

## ಓದುಗರ ಅನಿಸಿಕೆ...


ಪಟ್ಟಣ ಸಹಕಾರ ಬ್ಯಾಂಕುಗಳ ವಾರ್ತಾ ಪತ್ರಿಕೆ

**ಸೇವೆ ಇನ್ನಷ್ಟು ವಿಸ್ತಾರಗೊಳ್ಳಬೇಕಿದೆ :** ಅಲ್ಪ ಆದಾಯದ ಗ್ರಾಹಕರನ್ನು ಹೊಂದಿರುವ ಪಟ್ಟಣ ಸಹಕಾರ ಬ್ಯಾಂಕುಗಳು ಅವರುಗಳಿಗೆ ಆರ್ಥಿಕ ನೆರವು ನೀಡುವ ಮೂಲಕ ಉತ್ತಮ ಸಮಾಜ ಕಟ್ಟುವಲ್ಲಿ ಸಾಕಷ್ಟು ನೆರವಾಗಿವೆ. ನಮ್ಮ ದೇಶದಲ್ಲಿ ಇರುವ ಸುಮಾರು 1400 ಪಟ್ಟಣ ಸಹಕಾರ ಬ್ಯಾಂಕುಗಳು ದೇಶದ ಮತ್ತು ರಾಜ್ಯದ ಅಭಿವೃದ್ಧಿಗೆ ಸಾಕಷ್ಟು ಕಾಣಿಕೆ ನೀಡುತ್ತಿವೆ. ಇವುಗಳ ಸೇವೆ ಇನ್ನಷ್ಟು ವಿಸ್ತಾರಗೊಳ್ಳಬೇಕಿದೆ.

**▸▸ ಚಂಪಾ ಪಟ್ಟಣಶೆಟ್ಟಿ, ಹಾವೇರಿ**

**ಶ್ಲಾಘನೀಯವಾಗಿದೆ :** ನಮ್ಮ ಪಟ್ಟಣ ಸಹಕಾರ ಬ್ಯಾಂಕುಗಳು ಪ್ರತಿ ವರ್ಷದ ತಮ್ಮ ವಾರ್ಷಿಕ ಮಹಾಸಭೆಯಲ್ಲಿ ಎಸ್.ಎಸ್.ಎಲ್.ಸಿ., ಪರೀಕ್ಷೆ, ದ್ವಿತೀಯ ಪಿ.ಯು.ಸಿ ಪರೀಕ್ಷೆ ಮತ್ತು ಅಂತಿಮ ಪದವಿ ಪರೀಕ್ಷೆಯಲ್ಲಿ ಉತ್ತಮ ಅಂಕಗಳಿಸಿ ಉತ್ತೀರ್ಣರಾದ, ಕ್ರೀಡೆಯಲ್ಲಿ ರಾಜ್ಯ ಹಾಗೂ ರಾಷ್ಟ್ರೀಯ ಮಟ್ಟದಲ್ಲಿ ಪ್ರಶಸ್ತಿ ಪಡೆದ ತಮ್ಮ ಗ್ರಾಹಕರ, ಸಿಬ್ಬಂದಿಗಳ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಮಾಡುತ್ತಿರುವುದು ಶ್ಲಾಘನೀಯವಾಗಿದೆ.

**▸▸ ಎನ್. ಪ್ರಶಾಂತ್ ಬಂಗೇರ, ಬೈಂದೂರು**

ಸಂಪಾದಕರು :
**ಪುಂಡಲೀಕ ಎನ್. ಕೇರೂರೆ,**
ಮುಖ್ಯಕಾರ್ಯನಿರ್ವಹಣಾಧಿಕಾರಿ,
ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ
ಮಹಾಮಂಡಳ ನಿ., ಬೆಂಗಳೂರು.

**ಇವರಿಗೆ,**

Edited, Published and printed by Pundalik N. Kerure, C.E.O. on behalf of the
Karnataka State Co-operative Urban Banks Federation Ltd., Bangalore - 560027.
Published at : # 132, K.H. Road, Bangalore - 560027.
Printed at : Navarathna Printers, #35, 3rd Cross, Sudhamanagar, Bangalore - 560027.